ಮಾಡಿರುವ ಅರ್ಜಿಯನ್ನು ಅವರ ಪರವಾಗಿ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಅಧ್ಯಕ್ಷರೆ, 'ಶ್ರೀ ಕೆ.ಎಸ್. ಪುಟ್ಟರಾಜು, ಮುಖ್ಯ ಪೇದೆ, ಮೈಸೂರು ಇವರನ್ನು ಆಮಾನತ್ತಿನಲ್ಲಿಟ್ಟು ಸಂಬಳ ನೀಡದಿರುವ ಕುರಿತು ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೇ, ಶ್ರೀ ಕೆ.ಎಸ್. ಸುಬ್ಬಯ್ಯ ನಿವೃತ್ತ ಗ್ರಾಮ ಲೆಕ್ಕಿಗರು, ಕುಣಿಗಲ್ ತಾಲ್ಲೂಕು ಇವರಿಗೆ ನಿವೃತ್ತಿ ವೇತನ ಮಂಜೂರು ಮಾಡುವ ಕುರಿತು ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ಎಲ್ಲಾ ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

4) ವರದಿಗಳನ್ನೊಪ್ಪಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ 38ನೇ ವರದಿಯನ್ನು ಸಮಿತಿಯ ಸದಸ್ಯನಾದ ನಾನು ಸದನದಲ್ಲಿ ಮಂಡಿಸುತ್ತಿದ್ದೇವೆ.

ಅಧ್ಯಕ್ಷರು :— ವರದಿಯನ್ನೊಪ್ಪಿಸಲಾಯಿತು.

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿಲಾದ ವಿಷಯಗಳು.

ವಿಷಯ: ನಿಲುವಳಿ ಸೂಚನೆಗಳ ಮಂಡನೆಗೆ ಅನುಮತಿ ಕೋರಿ ಬಂದಿರುವ ನೋಟೀಸ್‌ಗಳು.

ಅಧ್ಯಕ್ಷರು :— ಮೂರು ನಿಲುವಳಿ ಸೂಚನೆಗೆ ನೋಟೀಸ್ ಬಂದಿವೆ, ಅವು ಯಾವುದೂ ಕೂಡ ನಿಲುವಳಿ ಸೂಚನೆ ಕಂಡಿಷನ್‌ಗೆ ಫುಲ್‌ಫಿಲ್ ಆಗುವುದಿಲ್ಲ. ಮೂರನ್ನೂ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ ನಿನ್ನೆ ಮೊನ್ನೆ ನಡೆದಂತಹ ಚರ್ಚೆ ನಡೆಯುವುದಾದರೆ ರಾಜ್ಯಪಾಲರ ಭಾಷಣಕ್ಕೆ ನಾವು ನಮ್ಮ ನಿಗಧಿತ ಅವಧಿಯೊಳಗೆ ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು 15ನೇ ತಾರೀಖಿನ ಒಳಗೆ ಪೂರ್ತಿ ಮಾಡಬೇಕಾಗುತ್ತದೆ. ನಿನ್ನೆ ಇದ್ದಂತಹ ಶೂನ್ಯ ವೇಳೆ ಕೂಡ ಇವತ್ತಿಗೆ ತೆಗೆದುಕೊಂಡಿದ್ದೇವೆ. ನಿನ್ನೆ ಇದ್ದಂತಹ ಗಮನಸೆಳೆಯುವ ಸೂಚನೆ ಕೂಡ ಲ್ಯಾಪ್ಸ್ ಆಗಿವೆ. ಆದ್ದರಿಂದ ಇವತ್ತು ನೀವು ಸೂರತ್ಕಲ್ ವಿಚಾರಕ್ಕೆ ತಾವು ಕೊಟ್ಟಿದ್ದೀರಿ, ಅತಿವೃಷ್ಟಿ ಅನಾವೃಷ್ಟಿ ಬಗ್ಗೆ ಅವರು ಕೊಟ್ಟಿದ್ದಾರೆ, ಬಿಪಿಎಲ್ ಸಂಸ್ಥೆ ವಿಚಾರಕ್ಕೆ ಶ್ರೀಮಾನ್ ಶ್ರೀರಾಮರೆಡ್ಡಿಯವರು ಕೊಟ್ಟಿದ್ದಾರೆ. ಟೈಮ್ ಲಿಮಿಟ್